ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Thursday, 31st May, 1979/Jyeishta, 10, 1901 S.E.

The House met in the Assembly Chamber, Vidhana Soudha at Eleven of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

Criteria for fixing Land Revenue

476 SRI M.Y. PATIL (Afzalpur)—Will the Minister for Revenue be pleased to state :—

(a) what was the criteria or basis on which the Land Revenue was determined/fixed in the State ;

(b) are there any differences in fixing the Land Revenue, if so, the reasons for the differences in Land Revenue rates from Hyderabad Karnataka region to that of Bombay Karnataka and Old Mysore region ;

(c) the reasons for the comparatively higher rate of Land Revenue in Hyderabad Karnataka area ;

(d) whether the Government has taken any measures to reduce the Land Revenue imbalances from region to region?

SRI B. BASAVALINGAPPA (Minister for Revenue).—

(a) The Land Revenue in the State has been fixed as per the provisions of Karnataka Land Revenue Act—(Sec 114 to 124 of Karnataka Land Revenue Act, 1964).

(b) Though the principles of assessment of Land Revenue are the same throughout the State, there are bound to be differences in actual rate since the yield per acre and values of other factors to be taken into consideration to form a group for which standard rates are to be fixed vary from zone to zone.

(c) The rates are not significantly higher in the Hyderabad Karnataka area as compared to other areas of the State.

(d) The marginal differences in standard rates cannot be onstrued as imbalance as these are determined after taking into consideration several relevant factors.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಹೈದ್ರಾಬಾದ್ ಕರ್ನಾಟಕದಲ್ಲಿ ಲ್ಯಾಂಡ್ ರೆವಿನ್ಯೂ ಅಸೆಸ್ ಮಾಡುವಾಗ ಬಹಳ ಅನ್ಯಾಯ ಆಗಿದೆ. ಏತಕ್ಕೆಂದರೆ ಬಾಂಬೆ ಕರ್ನಾಟಕ ಮತ್ತು ಹಳೇ ಮೈಸೂರಿನಲ್ಲಿ ಇರತಕ್ಕಂಥಾ ಲ್ಯಾಂಡ್ ರೆವಿನ್ಯೂಗಿಂತ ೪ ಪಟ್ಟು ಹೈದ್ರಾಬಾದ್ ಕರ್ನಾಟಕದಲ್ಲಿ ಹೆಚ್ಚಾಗಿದೆ ಎಂದು ನಮ್ಮ ಗಮನಕ್ಕೆ ಬಂದಿದೆ. ಮೊದಲು ಹೈದ್ರಾಬಾದ್ ಕರ್ನಾಟಕದಲ್ಲಿ ಏನಾಗಿತ್ತು ಎಂದರೆ ನಿಜಾಮರ ಸರ್ಕಾರದಲ್ಲಿ ಲ್ಯಾಂಡ್ ರೆವಿನ್ಯೂ ಹೆಚ್ಚಾಗಿತ್ತು. ಏತಕ್ಕೆಂದರೆ ಅವರ ಬೊಕ್ಕಸಕ್ಕೆ ಹೆಚ್ಚು ಹಣ ಬರಬೇಕು ಅಂತ ಅವರು ಮಾಡಿದರು. ಮುಂದೆ ಸರ್ವೆ ಸೆಟಲ್‌ಮೆಂಟ್‌ನವರು ಈ ಬಗ್ಗೆ ಅಸೆಸ್ ಮಾಡಿದಾಗ ನಮ್ಮ ಜನರ ಅಬ್ಜಕ್ಷನ್ ಹಾಕದೇ ಇರುವ ಸಲುವಾಗಿ ಮೊದಲಿದ್ದ ಹಾಗೆಯೇ ಉಳಿದುಕೊಂಡಿದೆ. ಇದಕ್ಕೆ ತಾವೇನಾದರೂ ಕೂಡ ಮತ್ತೊಮ್ಮೆ ಸೆಟಲ್‌ಮೆಂಟ್ ಮಾಡುವ ಹಾಗೆ ವ್ಯವಸ್ಥೆ ಮಾಡುತ್ತೀರಾ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅಲ್ಲದೆ ಲ್ಯಾಂಡ್ ರೆವಿನ್ಯೂವನ್ನು ನಮ್ಮ ಜನ ಕೊಡಲಿಕ್ಕೆ ಹಿಂದು ಮುಂದು ನೋಡುವುದಿಲ್ಲ. ಆದರೆ ಇದರಲ್ಲಿ ಸೈಡ್ ಎಫೆಕ್ಟ್ ಆಗಿರುವುದರಿಂದ ನಮ್ಮ ರೈತರಿಗೆ ಬಹಳ ತೊಂದರೆಯಾಗಿದೆ. ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಇದರಲ್ಲಿ ಸರಿಯಾಗಿಯೇ ಪರಿಹಾರವನ್ನು ಕಂಡುಹಿಡಿದಿದಾರೆ. ೧೯೬೪ರಲ್ಲಿ ಇದನ್ನು ರೀಸೆಟಲ್‌ಮೆಂಟ್ ಮಾಡುವಾಗ ಆ ಜಮೀನು ಮೇಲೆ ಕಂದಾಯವನ್ನು ರೀಫಿಕ್ಸ್‌ಮಾಡುವಾಗ ಅದರ ಒಂದು ಫರ್ಟಿಲಿಟಿ ಮೇಲೆ ಅದರ ಒಂದು ವಾತಾವರಣದ ಮೇಲೆ ಮತ್ತು ಅವರು ಯಾವ ಯಾವ ಬೆಳೆಯನ್ನು ಬೆಳೆಯುತ್ತಾರೆ ಅದರ ಒಂದು ಆಧಾರದ ಮೇಲೆ ಸರ್ವೆ ಡಿಪಾರ್ಟ್‌ಮೆಂಟಿನವರು ಭೂಕಂದಾಯವನ್ನು ನಿಗದಿಗೊಳಿಸುತ್ತಾರೆ.

ಮಾನ್ಯ ಸದಸ್ಯರು ಲ್ಯಾಂಡ್ ರೆವಿನ್ಯೂ ಅವರ ಭಾಗದಲ್ಲಿ ನಾಲ್ಕುಪಟ್ಟುಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಧಾರವಾಡದಲ್ಲಿ ಖುಷ್ಕಿ ಜಮೀನಿಗೆ ೩–೧೩ ಪೈಸೆ ಇದೆ, ಆಮೇಲೆ ಬಿಜಾಪುರದಲ್ಲಿ ೧–೩೫ ಪೈಸೆ ಇದೆ. ಬಿಜಾಪುರ ರೆನೇ ಸರ್ಕಲ್‌ನಲ್ಲಿ ೩–೨೬ ಪೈಸೆ ಇದೆ, ೭ನೇ ಸರ್ಕಲ್‌ನಲ್ಲಿ ೧–೩೫ ಪೈಸೆ ಇದೆ, ಗುಲ್ಬರ್ಗ ಜಿಲ್ಲೆಯಲ್ಲಿ ೨–೯೧ ಪೈಸೆ ಇದೆ, ೨–೨೫ ಪೈಸೆ ಇದೆ, ಗುಲ್ಬರ್ಗ ಎರಡನೆಯ ಸರ್ಕಲ್‌ನಲ್ಲಿ ೨–೯೭ ಪೈಸೆ ಇದೆ ; ೩–೫೦ ಪೈಸೆ ಇದೆ. ಆದ್ದರಿಂದ ಮಾನ್ಯ ಸದಸ್ಯರು ನಾಲ್ಕು ಪಟ್ಟು ಮೂರು ಪಟ್ಟು ಎಂದು ಹೇಳುತ್ತಿದ್ದಾರೆ ಅದು ಇಲ್ಲವೇ ಇಲ್ಲ. ಸರ್ವೇ ಸಾಧಾರಣವಾಗಿ ಒಂದೇ ತರಹ ಇದೆ ಎಲ್ಲೆಲ್ಲಿ ಬೆಳೆಗಳು ಚೆನ್ನಾಗಿ ಬರುತ್ತವೆಯೋ, ವ್ಯಾಪಾರ ಬೆಳೆಗಳು ಇರುತ್ತವೆ ಅಂಥ ಕಡೆ ಕಂದಾಯವನ್ನು ಸ್ವಲ್ಪ ಜಾಸ್ತಿ ಮಾಡುವುದು ಕಡಿಮೆ ಮಾಡುವುದು ಮಾಡಿದ್ದೇವೆ. ಹೊಸದಾಗಿ ನಾವು ಗುಲ್ಬರ್ಗ ಜಿಲ್ಲೆಗೆ ಹೊಟ್ಟೆ ಉರಿಯಿಂದ ನಾವೇನೂ ಮಾಡಿಲ್ಲ. ಶಾಸ್ತ್ರೀಯವಾಗಿ ನಾವು ಕಂದಾಯವನ್ನು ವಿಧಿಸಿದ್ದೇವೆ.

ಶ್ರೀ ಎಂ. ವೈ ಪಾಟೀಲ್.—ಕ್ಲಾಸಿಫಿಕೇಷನ್ ಮಾಡುವುದರಲ್ಲಿ ಬಹಳ ತಪ್ಪಾಗಿದೆ. ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಿಂದ ನಾನು ಬಂದಿರುತ್ತೇನೆ. ನಮ್ಮಲ್ಲಿ ಮಳೆಯು ಬಹಳಷ್ಟು ಕಡಿಮೆ ಲ್ಯಾಂಡ್ಸ್ ಕೂಡ ಬೇರೆ ತಾಲ್ಲೂಕುಗಳಲ್ಲಿದ್ದ ಹಾಗೆ ಫಲವತ್ತಾಗಿ ಇಲ್ಲ. ಕ್ಲಾಸಿಫಿಕೇಷನ್‌ನಲ್ಲಿ ಬಹಳ ವ್ಯತ್ಯಾಸವಾಗಿದೆ. ಇದ ಕ್ಕೇನಾದರೂ ಪರಿಹಾರ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಪರಿಹಾರ ಏನೂ ಕೊಡಲಿಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಿಯಾದರೂ ಜಾಸ್ತಿ ಕಡಿಮೆ ಇದೆ ಎನ್ನುವ ನಿದರ್ಶನಗಳನ್ನು ನಮಗೆ ಕೊಟ್ಟರೆ ಅದನ್ನು ಬೇಕಾದರೆ ನಾನು ಪರಿಶೀಲನೆ ಮಾಡುತ್ತೇನೆ.

---

† indicates that remarks or speeches have not been revised by the member concerned.